# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1395 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ.ಗೌಡ (ಪಧವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.08.2025. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೂಸಿನ ಮನೆಯ ನಿರ್ಮಾಣದ ಉದ್ದೇಶವೇನು; ಯಾವ ವರ್ಷ ಕೂಸಿನ ಮನೆಯನ್ನು ಪ್ರಾರಂಭಿಸಲಾಯಿತು; ಯಾವ ವಯಸ್ಸಿನ ಮಕ್ಕಳನ್ನು ಇಲ್ಲಿ ಆರೈಕೆ ಮಾಡಲಾಗುತ್ತದೆ; | ▪ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕಾರ್ಮಿಕರ ಮಕ್ಕಳ ಆರೈಕೆಗಾಗಿ ಕೂಸಿನ ಮನೆಗಳನ್ನು ಪ್ರಾರಂಭಿಸಲಾಗಿದೆ.<br>▪ ಕೂಸಿನ ಮನೆ ಕಾರ್ಯ ಕ್ರಮವನ್ನು 2023-24 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.<br>▪ ಕೂಸಿನ ಮನೆಗಳಲ್ಲಿ 6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳನ್ನು ಆರೈಕೆ ಮಾಡಲಾಗುತ್ತದೆ. |
| (ಆ) | ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೂಸಿನ ಮನೆಗಳನ್ನು ನಿರ್ಮಾಣ ಮಾಡಲಾಗಿದೆ; ಪ್ರತಿ ಕೂಸಿನ ಮನೆಯ ನಿರ್ಮಾಣಕ್ಕೆ ಆದ ವೆಚ್ಚವೆಷ್ಟು; | ▪ ತುಮಕೂರು-175 ಕೋಲಾರ-129 ಮತ್ತು ಚಿಕ್ಕಬಳ್ಳಾಪುರ -144 ಸೇರಿ ಒಟ್ಟು 448 ಕೂಸಿನ ಮನೆಗಳನ್ನು ಪ್ರಾರಂಭ ಮಾಡಲಾಗಿದೆ.<br>▪ 2023-24 ನೇ ಸಾಲಿನಲ್ಲಿ ಪ್ರತಿ ಕೂಸಿನ ಮನೆ ಪ್ರಾರಂಭಿಸಲು ಅಗತ್ಯ ಸಾಮಗ್ರಿಗಳು ಮತ್ತು ಪೌಷ್ಟಿಕ ಆಹಾರಕ್ಕಾಗಿ ಸರ್ಕಾರದಿಂದ **₹1.21** ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಕೂಸಿನ ಮನೆ ಕಟ್ಟಡ ನಿರ್ಮಾಣ ಅಥವಾ ದುರಸ್ತಿಗಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. |
| (ಇ) | ಇಲ್ಲಿಯವರೆಗೆ ಕೂಸಿನ ಮನೆಗಳ ನಿರ್ವಹಣೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕೇಂದ್ರುವಾರು, ವರ್ಷವಾರು ವಿವರ ನೀಡುವುದು) | ಕೂಸಿನ ಮನೆಗಳ ನಿರ್ವಹಣೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನದ ವಿವರ:<br><br>**2023-24**: 46,09,39,600<br>**2024-25**: 37,83,49,361<br>**2025-26**: 12,51,64,067<br><br>ಕೇಂದ್ರುವಾರು, ವರ್ಷವಾರು ಅನುದಾನ ಬಿಡುಗಡೆ ವಿವರವನ್ನು ಅನುಬಂಧದಲ್ಲಿ ನೀಡಿದೆ. |

| | | |
|---|---|---|
| (ಈ) | ಪ್ರತಿ ಕೂಸಿನ ಮನೆಯ ನಿರ್ವಹಣೆಗೆ ಮಾಸಿಕವಾಗಿ ಮಾಡುತ್ತಿರುವ ವೆಚ್ಚವೆಷ್ಟು; ಪ್ರತಿ ಕೂಸಿನ ಮನೆಗೆ ಆಗಮಿಸುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ಆರೈಕೆ ಕೇಂದ್ರುವಾರು ನೀಡುವುದು) | • ಕೂಸಿನ ಮನೆಗೆ ಹಾಜರಾಗುವ ಪ್ರತಿ ಮಗುವಿನ ಪೌಷ್ಟಿಕ ಆಹಾರಕ್ಕಾಗಿ ಪ್ರತಿ ದಿನಕ್ಕೆ ₹ 12/- ರಂತೆ ಬಿಡುಗಡೆ ಗೊಳಿಸಲಾಗುತ್ತಿದೆ.<br>• ಪ್ರತಿ ಕೂಸಿನ ಮನೆಗೆ ನರೇಗಾ ಯೋಜನೆಯಡಿ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ 08 ಮಹಿಳೆಯರನ್ನು ಗುರುತಿಸಿ ಆರೈಕೆದಾರರಾಗಿ ತರಬೇತಿ ನೀಡಲಾಗಿದೆ.<br>• ಇಬ್ಬರು ಆರೈಕೆದಾರರು Rotation ಆಧಾರದ ಮೇಲೆ ಕೂಸಿನ ಮನೆಯನ್ನು ನಿರ್ವಹಿಸುತ್ತಾರೆ.<br>• ಆರೈಕೆದಾರರಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ನಿಗದಿಪಡಿಸಿದ ಕೂಲಿ ಪಾವತಿಸಲಾಗುತ್ತಿದೆ.<br>• ರಾಜ್ಯದಲ್ಲಿ ಒಟ್ಟು **35811** ಮಕ್ಕಳು ಪ್ರತಿದಿನ ಕೂಸಿನ ಮನೆಗೆ ಆಗಮಿಸುತ್ತಿದ್ದಾರೆ.<br>ಕೂಸಿನ ಮನೆಗೆ ಆಗಮಿಸುತ್ತಿರುವ ಕೇಂದ್ರುವಾರು ಮಕ್ಕಳ ಸಂಖ್ಯೆಯನ್ನು ಅನುಬಂಧದಲ್ಲಿ ನೀಡಿದೆ. |
| (ಉ) | ಹಲವು ಕೂಸಿನ ಮನೆಗಳಿಗೆ ಮಕ್ಕಳು ಬಾರದೇ ಇದ್ದರೂ ಆರೈಕೆದಾರರಿಗೆ ವೇತನ ಪಾವತಿ ಮತ್ತು ನಿರ್ವಹಣೆಯು ಗ್ರಾಮ ಪಂಚಾಯತಿಗಳಿಗೆ ಆರ್ಥಿಕ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಇವುಗಳ ನಿರ್ವಹಣೆಗೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಕೂಸಿನ ಮನೆಗಳಲ್ಲಿ ಮಕ್ಕಳು ಹಾಜರಾದ ಸಂದರ್ಭದಲ್ಲಿ ಮಾತ್ರವೇ ಕೂಸಿನ ಮನೆಗಳು ಕಾರ್ಯಾಚರಣೆಯಲ್ಲಿರುತ್ತದೆ ಮತ್ತು ಆರೈಕೆದಾರರಿಗೆ ನರೇಗಾ ಯೋಜನೆಯಡಿ ನಿಗದಿತ ಕೂಲಿಯನ್ನು ಪಾವತಿಸಲಾಗುತ್ತಿದೆ.<br>ಕೂಸಿನ ಮನೆ ನಿರ್ವಹಣೆಯು ಗ್ರಾಮ ಪಂಚಾಯಿತಿಗಳಿಗೆ ಆರ್ಥಿಕ ಹೊರೆ ಉಂಟಾಗಿರುವ ಕುರಿತು ಈವರೆವಿಗೂ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಊ) | ಕೂಸಿನ ಮನೆಯ ನಿರ್ವಹಣೆಯ ಮೇಲ್ವಿಚಾರಣೆಯನ್ನು ಯಾರಿಗೆ ವಹಿಸಲಾಗಿದೆ; ಇದಕ್ಕೆ ಸರ್ಕಾರ | • ಕೂಸಿನ ಮನೆಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಜಿಲ್ಲಾ ಹಂತದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನೊಳಗೊಂಡ ಮತ್ತು ತಾಲ್ಲೂಕು ಹಂತದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನೊಳಗೊಂಡ ಮೇಲ್ವಿಚಾರಣಾ ಸಮಿತಿಗಳನ್ನು ರಚಿಸಲಾಗಿದೆ. |

| | | |
|---|---|---|
| | ಮಾಡುತ್ತಿರುವ ವೆಚ್ಚವೆಷ್ಟು: (ಜಿಲ್ಲಾವಾರು ವಿವರ ನೀಡುವುದು) ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನೇ ಇವುಗಳ ಮೇಲ್ವಿಚಾರಣೆಗೆ ನೇಮಿಸಲು ಇರುವ ಸಮಸ್ಯೆಗಳೇನು: | • ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ICDS ಮೇಲ್ವಿಚಾರಕಿ, ಕೂಸಿನ ಮನೆ ಕೇಂದ್ರದ ವ್ಯಾಪ್ತಿಗೆ ಬರುವ ಶಾಲಾ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಕೂಸಿನ ಮನೆ ಆರೈಕೆದಾರರು ಮತ್ತು ಮಕ್ಕಳ ಪೋಷಕರನ್ನೊಳಗೊಂಡಂತೆ ಕೂಸಿನ ಮನೆ ಮೇಲ್ವಿಚಾರಣಾ ಸಮಿತಿಗಳನ್ನು ರಚಿಸಲಾಗಿದೆ.<br>• ಕೂಸಿನ ಮನೆಗಳ ಮೇಲ್ವಿಚಾರಣೆಗೆ ಸರ್ಕಾರದ ವತಿಯಿಂದ ಯಾವುದೇ ವೆಚ್ಚ ಭರಿಸಲಾಗುತ್ತಿರುವುದಿಲ್ಲ. |
| (ಋ) | ಶಿರಾ ತಾಲ್ಲೂಕಿನ ನಾದೂರಿನಲ್ಲಿ ನಿರ್ಮಾಣವಾಗಿರುವ ಕೂಸಿನ ಮನೆ ಉಪಯೋಗಕ್ಕೆ ಬಾರದೆ ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲ. ಸದರಿ ಕೇಂದ್ರವನ್ನು ಸದುಪಯೋಗ ಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮವೇನು; | ಶಿರಾ ತಾಲ್ಲೂಕಿನ ನಾದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಹಿಂದೆ ಅರಣ್ಯ ಇಲಾಖೆಯ ಕಟ್ಟಡದಲ್ಲಿ ತಾತ್ಕಾಲಿಕವಾಗಿ ಕೂಸಿನ ಮನೆ ಪ್ರಾರಂಭಿಸಲಾಗಿತ್ತು. ಸದರಿ ಕಟ್ಟಡವು ಇತ್ತೀಚೆಗೆ ಶಿಥಿಲಾವಸ್ಥೆ ತಲುಪಿರುವುದರಿಂದ ಕೂಸಿನ ಮನೆಯನ್ನು ನಾದೂರು ಗ್ರಾಮದ ಸರ್ಕಾರಿ ಪಾಠಶಾಲೆ ಆವರಣಕ್ಕೆ ಸ್ಥಳಾಂತರಿಸಿಕೊಂಡು ಕೂಸಿನ ಮನೆಯನ್ನು ಪ್ರತಿದಿನ ನಡೆಸಲಾಗುತ್ತಿದೆ. |
| (ಎ) | ಕೂಸಿನ ಮನೆಯನ್ನು ಪ್ರತ್ಯೇಕವಾಗಿ ನಿರ್ಮಾಣ ಮಾಡುವ ಬದಲು ಸದರಿ ಗ್ರಾಮಗಳಲ್ಲಿ ಇರುವ ಅಂಗನವಾಡಿ ಕೇಂದ್ರಕ್ಕೆ ಉತ್ತಮ ಸೌಲಭ್ಯ ಕಲ್ಪಿಸಿ, ಅಲ್ಲಿಯೇ ಮಕ್ಕಳ ಆರೈಕೆಗೆ ಬಿಡಲು ಸರ್ಕಾರ ಕೈಗೊಳ್ಳುವ ಕ್ರಮವೇನು? | ▪ ಅಂಗನವಾಡಿಗಳಲ್ಲಿ 3 ರಿಂದ 6 ವರ್ಷದ ಮಕ್ಕಳ ಆರೈಕೆ ಮಾಡಲಾಗುತ್ತದೆ ಮತ್ತು 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮನೆಗೆ ಪೌಷ್ಟಿಕ ಆಹಾರ ಪೂರೈಸಲಾಗುತ್ತದೆ. ಅಂಗನವಾಡಿಗಳಲ್ಲಿ 3 ವರ್ಷದೊಳಗಿನ ಮಕ್ಕಳಿಗೆ ಅವಕಾಶವಿರುವುದಿಲ್ಲ.<br>▪ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಪ್ರಕರಣ 58(5) ಮತ್ತು ಮಹಾತ್ಮ ಗಾಂಧಿ ನರೇಗಾ ಅಧಿನಿಯಮದ ಎರಡನೇ ಅನುಸೂಚಿಯಪ್ಯಾರಾ (24) ರಲ್ಲಿನ ಉಪಬಂಧಗಳಂತೆ, ನರೇಗಾ ಯೋಜನೆಯಡಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸುವ ಉದ್ದೇಶದಿಂದ 6 ತಿಂಗಳಿನಿಂದ 3 ವರ್ಷದೊಳಗಿನ ಮಕ್ಕಳ ಆರೈಕೆಗಾಗಿ "ಕೂಸಿನಮನೆ" ಪ್ರಾರಂಭಿಸಲಾಗಿದೆ. |

**ಸಂಖ್ಯೆ:** ಗ್ರಾಅಪ 641 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು